# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 630 |
| ಉತ್ತರಿಸಬೇಕಾದ ದಿನಾಂಕ | 21-02-2023 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆಗಳಲ್ಲಿ ಯುಜಿಡಿ ವ್ಯವಸ್ಥೆಯನ್ನು ಈಗಾಗಲೇ ಸಂಪೂರ್ಣವಾಗಿ ಅಳವಡಿಸಲಾಗಿದೆಯೇ; (ವಿವರ ನೀಡುವುದು). | ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಯುಜಿಡಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಳವಡಿಸಿರುವುದಿಲ್ಲ. ವಿವರ ಈ ಕೆಳಗಿನಂತಿದೆ:<br><br>**ಉಳ್ಳಾಲ ನಗರ ಸಭೆ:**<br>ಉಳ್ಳಾಲ ಪಟ್ಟಣಕ್ಕೆ ಒಳಚರಂಡಿ ಕಲ್ಪಿಸುವ ರೂ.6571.00 ಲಕ್ಷ ಮೊತ್ತದ ಯೋಜನೆಗೆ ದಿನಾಂಕ 23-06-2009 ರಂದು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಯಡಿ ವಿವಿಧ ವ್ಯಾಸಗಳ ಮಲೀನ ನೀರಿನ ಆಂತರಿಕೆ ಕೊಳವೆ ಜಾಲ ಮತ್ತು ಆಳುಗುಂಡಿಗಳನ್ನು ಅಳವಡಿಸುವ ಕಾಮಗಾರಿಯ ಗುತ್ತಿಗೆಯನ್ನು ದಿನಾಂಕ 18-06-2010 ರಲ್ಲಿ ನೀಡಿದ್ದು, 60.50 km ಮಲೀನ ನೀರಿನ ಆಂತರಿಕ ಕೊಳವೆ ಜಾಲ ಅಳವಡಿಕೆ ಮತ್ತು 2228 ಆಳುಗುಂಡಿಗಳನ್ನು ನಿರ್ಮಿಸುವ ಕಾಮಗಾರಿಯನ್ನು ಮೇ 2015ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ.<br>ಮುಂದುವರಿದಂತೆ, ವೆಟ್‌ವೆಲ್ ಮತ್ತು ಮಲೀನ ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡಲು ಜಮೀನು ಲಭ್ಯವಿಲ್ಲದ ಕಾರಣ ಎರಡನೇ ಪ್ಯಾಕೇಜ್ ನಡಿ 8 ವೆಟ್‌ವೆಲ್‌ಗಳು ಹಾಗೂ 2 ಮಲೀನ ನೀರು ಶುದ್ಧೀಕರಣ ಘಟಕಗಳ ನಿರ್ಮಾಣ, ಪಂಪಿಂಗ್ ಮಷಿನರಿಗಳನ್ನು ಪೂರಕ ಸಾಮಗ್ರಿಗಳೊಂದಿಗೆ ಅಳವಡಿಸುವ ಕಾಮಗಾರಿಯ ಗುತ್ತಿಗೆಯನ್ನು ದಿನಾಂಕ 27-02-2019 ರಂದು ವಹಿಸಿಕೊಡಲಾಗಿರುತ್ತದೆ. ಇವುಗಳಲ್ಲಿ 7 ವೆಟ್‌ವೆಲ್‌ಗಳ ಕಾಮಗಾರಿಯ ಜಮೀನಿನ ಬಗ್ಗೆ ವಿವಾದವಿದ್ದು, ಮಂಡಳಿಗೆ ಜಮೀನು ಹಸ್ತಾಂತರಿಸಲಾಗಿರುವುದಿಲ್ಲ. ಆದುದರಿಂದ ಕಾಮಗಾರಿ ಸ್ಥಗಿತವಾಗಿರುತ್ತದೆ.<br><br>**ಬಂಟ್ವಾಳ ಪುರ ಸಭೆ:**<br>ಬಂಟ್ವಾಳ ಪಟ್ಟಣದ ಒಂದನೇ ಹಂತದ ಒಳಚರಂಡಿ ಕಾಮಗಾರಿ ಯೋಜನೆಯ ರೂ.1227.00 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ದಿನಾಂಕ 25-02-2004 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಆದರೆ ವೆಟ್‌ವೆಲ್ ಮತ್ತು ಮಲೀನ ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡಲು ಜಮೀನು ಲಭ್ಯವಿಲ್ಲದ |
| ಆ | ಈ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಈಗಾಗಲೇ ಅನುಮೋದನೆಗೊಂಡ ಎಲ್ಲಾ ಯುಜಿಡಿ ಕಾಮಗಾರಿಗಳನ್ನು ಪೂರ್ಣವಾಗಿ ಅನುಷ್ಠಾನ ಗೊಳಿಸಲಾಗಿದೆಯೇ; | |
| ಇ | ಈಗಾಗಲೇ ಅನುಮೋದನೆಗೊಂಡ ಎಲ್ಲಾ ಯುಜಿಡಿ ಕಾಮಗಾರಿಗಳನ್ನು ಇದುವರೆವಿಗೂ ಸಂಪೂರ್ಣವಾಗಿ ಅನುಷ್ಠಾನಗೊಳಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು; | |

| | | |
|---|---|---|
| | | ಕಾರಣ ಸದರಿ ಯೋಜನೆಯಡಿ ಮ್ಯಾನ್ ಹೋಲ್ ನಿರ್ಮಾಣ ಮತ್ತು ಸೀವರ್ ಲೈನ್ ಅಳವಡಿಸಲು ಎಪ್ರಿಲ್ - 2009ರಲ್ಲಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು ಇದರಲ್ಲಿ 1327 ಆಳುಗುಂಡಿಗಳು ಮತ್ತು 30.50 ಕಿ.ಮೀ. ಸೀವರ್ ಲೈನ್ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.<br><br>ಬಂಟ್ವಾಳ ಪಟ್ಟಣದ ಎರಡನೇ ಹಂತದ ಒಳಚರಂಡಿ ಕಾಮಗಾರಿ ಯೋಜನೆಯ ರೂ. 5654.18 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ದಿನಾಂಕ 30-11-2017 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಯಡಿ 7 ವೆಟ್‌ವೆಲ್ ಹಾಗೂ 2 ಮಲೀನ ನೀರು ಶುದ್ದೀಕರಣ ಘಟಕನಿರ್ಮಿಸಬೇಕಾಗಿರುತ್ತದೆ. 5 ವೆಟ್‌ವೆಲ್‌ಗಳು ಮತ್ತು 1 ಮಲೀನ ನೀರು ಶುದ್ದೀಕರಣ ಘಟಕಕ್ಕೆ (ಭಾಗಶ:) ಜಮೀನುಗಳನ್ನು ಸ್ಥಳೀಯ ಸಂಸ್ಥೆಯು ಹಸ್ತಾಂತರಿಸಿದ್ದು, ಅವುಗಳಿಗೆ ಟೆಂಡರ್ ಆಹ್ವಾನಿಸಲು ಕ್ರಮ ವಹಿಸಲಾಗಿದೆ.<br><br>**ಬೆಳ್ತಂಗಡಿ ಪಟ್ಟಣ ಪಂಚಾಯಿತಿ:**<br>ಸದರಿ ಪಟ್ಟಣಕ್ಕೆ NGT ನಿರ್ದೇಶನದನ್ವಯ FSSM ಮಾದರಿಯ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ರೂ.10.30 ಕೋಟಿ ಅಂದಾಜು ಪಟ್ಟಿಗೆ ದಿನಾಂಕ 25-03-2021 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಯೋಜನೆಯಡಿ ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ.<br><br>**ಸುಳ್ಯ ಪಟ್ಟಣ ಪಂಚಾಯಿತಿ:**<br>ಸದರಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ನಗರದ ಮುಖ್ಯ ಭಾಗದಲ್ಲಿ (core area) ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಪ್ರಸ್ತುತ ಸ್ಥಳೀಯ ಸಂಸ್ಥೆಯ ನಿರ್ವಹಣೆಯಲ್ಲಿರುತ್ತದೆ.<br><br>**ಮೂಡಬಿದ್ರೆ ಪುರಸಭೆ:**<br>ಪಟ್ಟಣಕ್ಕೆ FSSM ಮಾದರಿಯ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾರ್ಯಸಾಧ್ಯತೆಯ ಬಗ್ಗೆ ಪೌರಾಡಳಿತ ನಿರ್ದೇಶನಾಲಯಕ್ಕೆ ಸೂಚಿಸಲಾಗಿದೆ ಮತ್ತು ಯೋಜನೆಗೆ ನಿವೇಶನ ಒದಗಿಸಲು ಸ್ಥಳೀಯ ಸಂಸ್ಥೆಗೆ ಸೂಚಿಸಲಾಗಿದೆ.<br><br>**ಸೋಮೇಶ್ವರ ಪುರಸಭೆ:**<br>ಪ್ರಸ್ತುತ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಸ್ಥಳೀಯ ಸಂಸ್ಥೆಯಿಂದ ಒಳಚರಂಡಿ ವ್ಯವಸ್ಥೆ ಒದಗಿಸುವ ಬಗ್ಗೆ ಯಾವುದೇ ಕೋರಿಕೆ ಬಂದಿರುವುದಿಲ್ಲ.<br><br>**ಪುತ್ತೂರು ನಗರಸಭೆ:**<br>ಪುತ್ತೂರು ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ಯೋಜನೆಗಾಗಿ ಭೂಸ್ವಾಧೀನದ ಅವಶ್ಯಕತೆ, ಭೌಗೋಳಿಕವಾಗಿ ಪುತ್ತೂರು ನಗರವು ಇಳಿಜಾರು ಪ್ರದೇಶಗಳಿಂದ |

| | | |
|---|---|---|
| | | ಕೂಡಿರುವುದರಿಂದ ಅಗತ್ಯಕ್ಕೆ ತಕ್ಕಂತೆ ಹೆಚ್ಚು ವೆಟ್‌ವೆಲ್‌ಗಳನ್ನು ನಿರ್ಮಿಸಬೇಕಿರುತ್ತದೆ. ಇದರಿಂದ ನಿರ್ವಹಣೆ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗೆ ಹೆಚ್ಚು ಆರ್ಥಿಕ ಹೊರೆಯಾಗುತ್ತದೆ ಮತ್ತು ಕ್ರಿಮಿಫ್ ಕಾರ್ಯಕ್ರಮವನ್ನು ಐಡಿಬಿ ನೆರವಿನ ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕಿರುತ್ತದೆ. ಈ ಹಿನ್ನೆಲೆಯ ಕ್ರಿಮಿಷ, ಕಾರ್ಯಕ್ರಮದಡಿ ಕೆಯುಐಡಿಎಫ್‌ಸಿ ವತಿಯಿಂದ ಪುತ್ತೂರು ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ಕಾಮಗಾರಿಯನ್ನು ಅನುಷ್ಠಾನಗೊಳಿಸುತ್ತಿಲ್ಲ. ಸರ್ಕಾರದ ಆದೇಶದ ಸಂಖ್ಯೆ ನಅಇ 16 ಸಿಎಸ್‌ಎಸ್ 2016, ದಿನಾಂಕ:03-12-2018 ರಂತೆ ಮತ್ತೂರು ನಗರ ಸಭೆ ವ್ಯಾಪ್ತಿಯಲ್ಲಿ ಮಾನವ ತ್ಯಾಜ್ಯ ಕಲ್ಮಷಗಳ ಸಂಸ್ಕರಣೆ ಹಾಗೂ ನಿರ್ವಹಣೆ ಯಡಿ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ಸೂಚಿಸಿರುತ್ತಾರೆ.<br><br>**ಮೂಲ್ಕಿ, ವಿಟ್ಲ, ಕೋಟೆಕಾರ್, ಕಡಬ, ಬಜ್ಪೆ, ಕಿನ್ನಿಗೋಳಿ** ಪಟ್ಟಣ ಪಂಚಾಯತಿಗಳಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಸ್ಥಳೀಯ ಸಂಸ್ಥೆಗಳಿಂದ ಒಳಚರಂಡಿ ವ್ಯವಸ್ಥೆ ಒದಗಿಸುವ ಬಗ್ಗೆ ಯಾವುದೇ ಕೋರಿಕೆ ಬಂದಿರುವುದಿಲ್ಲ.<br><br>ಈ ಮೇಲೆ ತಿಳಿಸಿರುವ ಒಳಚರಂಡಿ ಯೋಜನೆಗಳಿಗೆ ಅವಶ್ಯವಿರುವ ಜಮೀನುಗಳನ್ನು ಸಂಪೂರ್ಣವಾಗಿ ಮಂಡಳಿಗೆ ಹಸ್ತಾಂತರಿಸದಿರುವುದರಿಂದ ಹಾಗೂ ವೆಟವೆಲ್ ಮತ್ತು ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣದ ಸ್ಥಳದ ಬಗ್ಗೆ ಸ್ಥಳೀಯರ ವಿರೋಧಗಳಿಂದಾಗಿ ಒಳಚರಂಡಿ ಕಾಮಗಾರಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ. |
| ಈ | ಸದರಿ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಯುಜಿಡಿ ವ್ಯವಸ್ಥೆಯು ಅನುಷ್ಠಾನಕ್ಕೆ ಬಾಕಿ ಉಳಿದಿದ್ದಲ್ಲಿ ಯಾವ ಕಾಲಮಿತಿಯೊಳಗೆ ಸಂಪೂರ್ಣವಾಗಿ ಯುಜಿಡಿ ವ್ಯವಸ್ಥೆಯನ್ನು ಕಲ್ಪಿಸಿ, ನೈರ್ಮಲ್ಯ ಕಾಪಾಡಲು ಕ್ರಮ ವಹಿಸಲಾಗುವುದು? | ಈಗಾಗಲೇ ಪ್ರಗತಿಯಲ್ಲಿರುವ ಒಳಚರಂಡಿ ಕಾಮಗಾರಿಗಳಿಗೆ ಅಗತ್ಯವಿರುವ ಎಲ್ಲಾ ಜಮೀನುಗಳನ್ನು ಆಯಾ ಸ್ಥಳೀಯ ಸಂಸ್ಥೆಗಳಿಂದ ಮಂಡಳಿಗೆ ಹಸ್ತಾಂತರವಾದ ನಂತರ 2 ವರ್ಷದಲ್ಲಿ ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದು. |

ಸಂಖ್ಯೆ : ನಅಇ 8 ಯುಎಂಎಸ್ 2023

(ಬಿ. ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು
ನಗರಾಭಿವೃದ್ಧಿ ಸಚಿವರು